ಕೋಟೆಯ ಹೆಬ್ಬಾಗಿಲು









ಕಾಳಿ ಮಾತಾ ಮಂದಿರ

ಖಜಾನೆ ಕೂಡ ಇಲ್ಲಿತ್ತು.

ರಾಣಿ ಪದ್ಮಿನಿಯ ಬೇಸಿಗೆಯ ಅರಮನೆ: ಕೊಳದ ಮಧ್ಯದಲ್ಲಿ ರಾಜ ರತನ್ ಸಿಂಗ್ ಪತ್ನಿ ರಾಣಿ ಪದ್ಮಿನಿಯ ಮೂರಂತಸ್ತಿನ ಬೇಸಿಗೆ ಅರಮನೆ ಇದೆ. ಅಲ್ಲಿಗೆ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಕೆಲವು ಇತಿಹಾಸ ತಜ್ಞರ ಪ್ರಕಾರ ರಾಣಿ ಪದ್ಮಿನಿಯ ಅಸ್ತಿತ್ವ ಕಾಲ್ಪನಿಕ. ಆದರೆ ಚಿತ್ತೋರಗಢ ಕೋಟೆಯಲ್ಲಿ ಬೇಸಿಗೆ ಅರಮನೆ, ಹೂದೋಟ, ದಾಸಿಯರ ಕೊಠಡಿಗಳು, ಅಲಾವುದ್ದೀನ್ ಖಿಲ್ಜಿ ರಾಣಿ ಪದ್ಮಿನಿಯನ್ನು ಕಂಡ ಜಾಗ ಎಲ್ಲವನ್ನೂ ಗೈಡುಗಳು ವಿವರಿಸುತ್ತಾರೆ. ಈ ಸಂಬಂಧದಲ್ಲಿ ಹಲವು ಕತೆಗಳನ್ನೂ ಹೇಳುತ್ತಾರೆ.

ಅಲಾವುದ್ದೀನ ಪಟ್ಟು ಹಿಡಿದ ಕಾರಣ ಕನ್ನಡಿಯಲ್ಲಿ ರಾಣಿ ಪದ್ಮಿನಿಯ ಬಿಂಬವನ್ನಷ್ಟೇ ಆತನಿಗೆ ತೋರಿಸಲಾಯಿತಂತೆ. ಅವಳ ಸೌಂದರ್ಯಕ್ಕೆ ಮಾರು ಹೋದ ಅಲಾವುದ್ದೀನ್ ಚಿತ್ತೋರಗಢ ಕೋಟೆಯನ್ನು ನಾಶಮಾಡಿ, ರತನ್ ಸಿಂಗನನ್ನು ಕೊಂದನಂತೆ. ಆಗ ರಾಣಿ ಪದ್ಮಿನಿ ಇತರರೊಂದಿಗೆ ಜೌಹರ್ ಮಾಡಿಕೊಂಡಳು ಎಂದು ಗೈಡ್ ನಮಗೆ ವಿವರಿಸಿದ.

ಮೀರಾ ಬಾಯಿ ಮಂದಿರ: ರಾಣ ಕುಂಭನ ಕಾಲದಲ್ಲಿ ಕೃಷ್ಣ ಭಕ್ತೆಯಾಗಿದ್ದ ಮೀರಾ ಬಾಯಿಗೋಸ್ಕರ ಕಟ್ಟಿದ ಕೃಷ್ಣನ ಮಂದಿರವಿದೆ. ಇಂಡೋ–ಆರ್ಯನ್ ಶೈಲಿಯ ಆಕರ್ಷಕ ವಾಸ್ತು ಶಿಲ್ಪವಿದೆ. ಮಂದಿರದ ಹೊರಗೆ ಮೀರಾ ಬಾಯಿಯ ಗುರು 'ರಾಯ ದಾಸ್'ನ ಹೆಜ್ಜೆಯ ಗುರುತು ಮತ್ತು ಛತ್ರಿ ಇದೆ. ರಜಪೂತ ಕನ್ಯೆ ಮೀರಾ ಬಾಯಿ  ರಾಣ ಕುಂಭನನ್ನು ವರಿಸಿ ಚಿತ್ತೋರಗಢಗೆ ಬಂದರೂ ತನ್ನ ಸಮಯವನ್ನು ಕೃಷ್ಣನ ಆರಾಧನೆ ಮತ್ತು ಭಜನೆಯಲ್ಲೇ ಕಳೆಯುತ್ತಿದ್ದಳು. ಮೀರಾ ಭಜನೆಗಳು ಅತೀ ಪ್ರಸಿದ್ಧ. ವರ್ಷಕೊಮ್ಮೆ 'ಮೀರಾ ಮಹೋತ್ಸವ'ವನ್ನು ಇಲ್ಲಿ ಆಯೋಜಿಸಲಾಗುತ್ತದೆ.

ಕುಂಭ ಶ್ಯಾಮ ಮಂದಿರ: ಎಂಟನೆಯ ಶತಮಾನದಲ್ಲಿ ನಿರ್ಮಾಣವಾಗಿತ್ತಾದರೂ ರಾಣ ಕುಂಭನ ಕಾಲದಲ್ಲಿ ಮೀರಾಬಾಯಿ ಅವರಿಗೆಂದೇ ನವೀಕರಿಸಲ್ಪಟ್ಟಿತು. ಮೀರಾ ಬಾಯಿ ಇಲ್ಲಿಯೇ ಹಾಡುತ್ತ